**ನಮೂನೆ ಜಿ.ಎಸ್.ಟಿ.ಆರ್ 3ಎ**

(ನಿಯಮ 68 ನೋಡಿ)

ಉಲ್ಲೇಖ ಸಂಖ್ಯೆ:

ದಿನಾಂಕ:

ಇವರಿಗೆ,
ಜಿ.ಎಸ್.ಟಿ.ಎನ್
ಹೆಸರು
ವಿಳಾಸ

**ರಿಟರ್ನ್ ಸಲ್ಲಿಸದಿರುವುದಕ್ಕಾಗಿ ರಿಟರ್ನ್ ಸಲ್ಲಿಸಲು ತಪ್ಪಿದವರಿಗೆ ಪ್ರಕರಣ46ರ ಅಡಿಯಲ್ಲಿ ಸೂಚನಾಪತ್ರ**

ತೆರಿಗೆ ಅವಧಿ: ರಿಟರ್ನ್ ವಿಧ–

ನೋಂದಾಯಿತ ತೆರಿಗೆದಾರರಾಗಿ ನೀವು, ಮೇಲೆ ಹೇಳಲಾದ ತೆರಿಗೆ ಅವಧಿಗಾಗಿ ಮಾಡಲಾದ ಅಥವಾ ಸ್ವೀಕರಿಸಿದ ಪೂರೈಕೆಗಳಿಗಾಗಿ ರಿಟರ್ನನ್ನು ಒದಗಿಸುವುದು ಮತ್ತು ತತ್ಪರಿಣಾಮವಾದ ತೆರಿಗೆ ಬಾಧ್ಯತೆಯನ್ನು ಗಡವು ದಿನಾಂಕದ ಒಳಗೆ ತೀರಿಸುವುದು ಅಗತ್ಯವಿರುತ್ತದೆ. ನೀವು ಸದರಿ ರಿಟರ್ನನ್ನು ಇಲ್ಲಿಯ ದಿನಾಂಕದವರೆವಿಗೂ ಸಲ್ಲಿಸದಿರುವುದನ್ನು ಗಮನಿಸಲಾಗಿದೆ.

2 ಅದ್ದರಿಂದ ನೀವು ಸದರಿ ರಿಟರ್ನ್ ಅನ್ನು 15ದಿನಗಳ ಒಳಗಾಗಿ ಸಲ್ಲಿಸುವಂತೆ ಕೋರಲಾಗಿದೆ. ತಪ್ಪಿದಲ್ಲಿ,ಅಧಿನಿಯಮದ ಪ್ರಕರಣ 62ರ ಅಡಿಯಲ್ಲಿ ಈ ಕಛೇರಿಯಲ್ಲಿ ಲಭ್ಯವಿರುವ ಸಂಬಂಧಪಟ್ಟ ಮಾಹಿತಿಯ ಆಧಾರದ ಮೇಲೆ ತೆರಿಗೆ ಬಾಧ್ಯತೆಯ ನಿರ್ಧರಣೆಯನ್ನು ಮಾಡಲಾಗುತ್ತದೆ. ಹೀಗೆ ನಿರ್ಧರಿಸಿದ ತೆರಿಗೆಗೆ ಹೆಚ್ಚುವರಿಯಾಗಿ ಅಧಿನಿಯಮದ ಉಪಬಂಧಗಳ ಪ್ರಕಾರ ಬಡ್ಡಿ ಮತ್ತು ದಂಡವನ್ನು ಸಹ ಸಂದಾಯ ಮಾಡಲು ನೀವು ಬಾಧ್ಯರಾಗುತ್ತೀರೆಂಬುದನ್ನು ದಯವಿಟ್ಟು ಗಮನಿಸಿರಿ.

3 ಬಾಧ್ಯತೆಯನ್ನು ನಿರ್ಧರಿಸುವುದಕ್ಕಾಗಿ ಇನ್ನು ಮುಂದೆ ಯಾವುದೇ ತಿಳುವಳಿಕೆಯನ್ನು ನೀಡುವುದಿಲ್ಲವೆಂಬುದನ್ನು ದಯವಿಟ್ಟು ಗಮನಿಸಿರಿ.

4 ಕರನಿರ್ಧರಣಾ ಆದೇಶವನ್ನು ನೀಡುವ ಮೊದಲೇ, ನೀವು ಮೇಲೆ ಉಲ್ಲೇಖಿಸಲಾದ ರಿಟರ್ನ್ ಸಲ್ಲಿಸಿದ್ದಲ್ಲಿ ಈ ಸೂಚನಾ ಪತ್ರವನ್ನು ಹಿಂಪಡೆಯಲಾಗಿದೆ ಎಂದು ಪರಿಭಾವಿಸತಕ್ಕದ್ದು

**ಅಥವಾ**

**ನೋಂದಣಿ ರದ್ದುಗೊಳಿಸಿದ ಮೇಲೆ ಅಂತಿಮ ರಿಟರ್ನ್ ಸಲ್ಲಿಸದಿರುವುದಕ್ಕಾಗಿ ರಿಟರ್ನ್ ಸಲ್ಲಿಸಲು ತಪ್ಪಿದವರಿಗೆ ಪ್ರಕರಣ46ರ ಅಡಿಯಲ್ಲಿ ಸೂಚನಾಪತ್ರ**

ರದ್ದುಗೊಳಿಸಿದ ಆದೇಶ ಸಂಖ್ಯೆ ದಿನಾಂಕ
ಅರ್ಜಿ ಉಲ್ಲೇಖ ಸಂಖ್ಯೆ ಯಾವುದಾದರೂ ಇದ್ದಲ್ಲಿದಿನಾಂಕ

1. ನೋಂದಣಿಯನ್ನು ಬಿಟ್ಟು ಕೊಡುವುದಕ್ಕಾಗಿಅರ್ಜಿ ಸಲ್ಲಿಸಿದ ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳಿಗಾಗಿ ನಿಮ್ಮ ನೋಂದಣಿಯ ರದ್ಧತಿಯ ಪರಿಣಾಮವಾಗಿ, ನೀವು, ಅಧಿನಿಯಮದ ಪ್ರಕರಣ 45ರ ಅಡಿಯಲ್ಲಿಅಗತ್ಯವಿರುವ ಅಂತಿಮ ರಿಟರ್ನ್‌ನ್ನು**ನಮೂನೆ ಜಿಎಸ್‌ಟಿಆರ್–10**ರಲ್ಲಿ ಸಲ್ಲಿಸುವುದು ಅಗತ್ಯವಾಗಿತ್ತು.
2. ನೀವು ಅಂತಿಮ ರಿಟರ್ನನ್ನು ಗಡವು ದಿನಾಂಕದ ಒಳಗೆ ಸಲ್ಲಿಸದಿರುವುದನ್ನು ಗಮನಿಸಲಾಗಿದೆ.
3. ಅದ್ದರಿಂದ ನೀವು ಅಧಿನಿಯಮದ ಪ್ರಕರಣ 45ರ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಅಂತಿಮ ರಿಟರ್ನ್ ಅನ್ನು 15ದಿನಗಳ ಒಳಗಾಗಿ ಸಲ್ಲಿಸುವಂತೆ ಕೋರಲಾಗಿದೆ. ತಪ್ಪಿದಲ್ಲಿ,ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಈ ಕಛೇರಿಯಲ್ಲಿ ಲಭ್ಯವಿರುವ ಅಥವಾ ಸಂಗ್ರಹಿಸಿರುವ ಸಂಬಂಧಪಟ್ಟ ಮಾಹಿತಿಯ ಆಧಾರದ ಮೇಲೆ ತೆರಿಗೆ ಬಾಧ್ಯತೆಯ ನಿರ್ಧರಣೆಯನ್ನು ಮೇಲೆ ಹೇಳಲಾದ ತೆರಿಗೆ ಅವಧಿಗೆ ಮಾಡಲಾಗುತ್ತದೆ. ಹೀಗೆ ನಿರ್ಧರಿಸಿದ ತೆರಿಗೆಗೆ ಹೆಚ್ಚುವರಿಯಾಗಿ ಅಧಿನಿಯಮದ ಉಪಬಂಧಗಳ ಪ್ರಕಾರ ಬಡ್ಡಿ ಮತ್ತು ದಂಡವನ್ನು ಸಹ ಸಂದಾಯ ಮಾಡಲು ನೀವು ಬಾಧ್ಯರಾಗುತ್ತೀರೆಂಬುದನ್ನು ದಯವಿಟ್ಟು ಗಮನಿಸಿರಿ.
4. ಕರನಿರ್ಧರಣಾ ಆದೇಶವನ್ನು ನೀಡುವ ಮೊದಲೇ, ನೀವು ರಿಟರ್ನ್ ಸಲ್ಲಿಸಿದ್ದಲ್ಲಿ ಈ ಸೂಚನಾ ಪತ್ರವನ್ನು ಹಿಂಪಡೆಯಲಾಗಿದೆ ಎಂದು ಪರಿಭಾವಿಸತಕ್ಕದ್ದು.

ಸಹಿ

ಹೆಸರು.
ಹುದ್ದೆ.